ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕ ಅಭಿಯಂತರರು
ಕಾರ್ಯ ಮತ್ತು ಪಾಲನಾ ವೃತ್ತ, ನವನಗರ,
ಬಾಗಲಕೋಟೆ–02
Tel: 08354/297330, Mob No 9449877676

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O&M Circle, Navanagar, Bagalkot-02
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ–1/2019–20/ 14219-14224 ದಿನಾಂಕ: 20 FEB 2020

ಪೀಠಿಕೆ:

ದಿನಾಂಕ: 11.02.2020 ರಂದು ಮಧ್ಯಾಹ್ನ 03.00 ಘಂಟೆಗೆ ಶ್ರೀ ಕಾಶಿನಾಥ ಜಿ ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

ಹಾಜರಿದ್ದವರು:1) ಶ್ರೀಮತಿ: ಎಸ್.ಜಿ ಹಿರೇಮನಿ, ಉಪಲೆಕ್ಕನಿಯಂತ್ರಣಾಧಿಕಾರಿ, ಕಾ ಮತ್ತು ಪಾ ವೃತ್ತ ಹೆಸ್ಕಾಂ, ಬಾಗಲಕೋಟ.
2) ಶ್ರೀ ಚಂದ್ರಶೇಖರ ವ್ಹಿ. ಶಿವಪೂಜಿ. ಹಾಗೂ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸದಸ್ಯರು, ಬಾಗಲಕೋಟ.
3) ಶ್ರೀ ಎ ಎಲ್ ನಾಯಕ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಬಾಗಲಕೋಟ ನಗರ.
4) ಶ್ರೀ ಶಾಂತಪ್ಪ.ಬಿ.ಸಾಲಿ, ಸಾ॥ ಬಾಗಲಕೋಟ, ಇವರ ಪರವಾಗಿ ಶ್ರೀ ರಂಗನಾಥ ಮ ಪಾಡಮುಖೆ, ಬಾಗಲಕೋಟ.

**ಪ್ರಕರಣ ಸಂಖ್ಯೆ: 01/2020**

ಶ್ರೀ ಶಾಂತಪ್ಪ.ಬಿ.ಸಾಲಿ, ಸಾ॥ ಬಾಗಲಕೋಟ,
ಇವರ ಪರವಾಗಿ ಶ್ರೀ ರಂಗನಾಥ ಮ ಪಾಡಮುಖೆ, ಬಾಗಲಕೋಟ. } --------ದೂರುದಾರರು.
ಪ್ರತಿನಿಧಿ:

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ನಗರ ಉಪ–ವಿಭಾಗ ಹುವಿಸಕಂನಿ.,
ಬಾಗಲಕೋಟ. } -------- ಪ್ರತಿವಾದಿ

ವಿಷಯ: ಪ್ರಕರಣ ಸಂಖ್ಯೆ: 01/2020 ರ ನಿಗದಿತ ಅವಧಿಯಲ್ಲಿ ವಿದ್ಯುತ್ ಸೌಕರ್ಯ ನೀಡದಿರುವ ಕುರಿತು.

*&*&*

ಪ್ರಕರಣ ಸಂಖ್ಯೆ: 01/2020 ಕ್ಕೆ ಸಂಬಂಧಿಸಿದಂತೆ ದಿನಾಂಕ: 11.02.2020 ರಂದು ಮಧ್ಯಾಹ್ನ 03.00 ಘಂಟೆಗೆ ಶ್ರೀ **ಕಾಶಿನಾಥ ಜಿ ಹಿರೇಮಠ**, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ಅಧಿಕಾರಿಗಳು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

1) ಶ್ರೀ ಎ.ಎಲ್.ನಾಯಕ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),ಕಾ ಮತ್ತು ಪಾ ನಗರ ಉಪವಿಭಾಗ ಹೆಸ್ಕಾಂ, ಬಾಗಲಕೋಟ ರವರು ಸಭೆಗೆ ಹಾಜರಾಗಿರುತ್ತಾರೆ ಅವರ ಲಿಖಿತ ಹೇಳಿಕೆ.

ಮೇಲಿನ ವಿಷಯದನ್ವಯದಯಾಪರರ ಗಮನಕ್ಕೆ ತರಬಯಸುವುದೇನೆಂದರೆ, ಅರ್ಜಿದಾರರಾದ ಶ್ರೀ. ವಿರೇಶ ಬಿ. ಹುಲ್ಯಾಳ ಮತ್ತು ಶ್ರೀ. ಶಾಂತಪ್ಪ ಭೀ. ಸಾಲಿ ರರವರು" ಸಿಟಿ. ಸರ್ವೆ ನಂ.203, ಪ್ಲಾಟ್ ನಂ.7ಮತ್ತು58,ಗುಜ್ಜರ್ ಲೇಔಟ್/ಹಾದಿಮನಿ ಲೇಔಟ್‌ನಲ್ಲಿರುವತಮ್ಮ ನಿವೇಶನಕ್ಕೆ ನಿಗದಿತ ಸಮಯದಲ್ಲಿ ವಿದ್ಯುತ್‌ಜಡಗಿಸದಿರುವಕುರಿತು"ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಲಾನುಸಾರಜರುಗಿದ ನಡಾವಳಿಗಳು ಈ ಕೆಳಕಂಡಂತಿರುತ್ತವೆ.

- ಅರ್ಜಿದಾರರ ಅರ್ಜಿ ಅನ್ವಯ ದಿನಾಂಕ. 28.01.2019 ರಂದು ಅಕೌಂಟ್ ಐಡಿ: 0445312151, 0431251789 & 3178382610/ 28.01.2019 ಅರ್ಜಿಯನ್ನು ನೊಂದಣಿ ಮಾಡಿಕೊಳ್ಳಲಾಗಿರುತ್ತದೆ.
- ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನಾ ವಿಭಾಗ ಬಾಗಲಕೋಟ ರವರು ಪತ್ರ ಸಂಖ್ಯೆ. ಬಿಜಿಕೆ/ಕಾಅ(ವಿ)/ಸಕಾಅ(ವಿ)(ತ)/ತಾಸ–2/2018–19/2376–82 ದಿನಾಂಕ.21.05.2019ರಂದು ಹೊರಡಿಸಿರುವ ಅಧಿಕೃತ ಜ್ಞಾಪಣಾ ಪತ್ರದಲ್ಲಿ ಅಭಿವೃದ್ಧಿಗಾರರಿಂದ ಅಭಿವೃದ್ಧಿ ಪಡಿಸದೇ ಇರುವ ಸರ್ವೆ ನಂಬರಗಳನ್ನು ವಿಭಾಗಿಯ ಕಛೇರಿಯಲ್ಲಿ ವಿದ್ಯುತ್ ಮಂಜೂರಾತಿಯನ್ನು ಪಡೆದು ಕೊಳ್ಳಲು ತಿಳಿಸಿರುತ್ತಾರೆ.
- ಮಾನ್ಯಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನಾ ವಿಭಾಗ ಬಾಗಲಕೋಟ ರವರ ಆದೇಶದಂತೆ ದಿನಾಂಕ.10.06.2019 ಸದರಿ ನೊಂದಾಯಿತ ಅರ್ಜಿಗಳನ್ನು ವಿದ್ಯುತ್ ಮಂಜೂರಾತಿಗೆ ವಿಭಾಗಿಯ ಕಚೇರಿಯಗೆ ಸಲ್ಲಿಸಲಾಗಿರುತ್ತದೆ. ಆದರೆ, ಸದರಿಯವರ ಸರ್ವೆ ನಂ. 203, ಮಾನ್ಯ ಮುಖ್ಯ ಅಭಿಂಯತರರು(ವಿ) ಕಾರ್ಯ ಮತ್ತು ಪಾಲನಾ ವಲಯ ಬೆಳಗಾವಿಯವರಿಂದ ಅನುಮೋದನೆ ಪಡೆದ ಪಟ್ಟಿಯಲ್ಲಿ ಇಲ್ಲದಿರುವುದರಿಂದ ದಿನಾಂಕ:–19.07.2019 ರಂದುಸದರಿಯವರ ಅರ್ಜಿಗಳನ್ನು ಸರ್ವೆ ನಂ. 203ರ ಅನುಮೋದಿತ ಪ್ರತಿಯನ್ನು ನೀಡಲು ಸೂಚಿಸುತ್ತಾ ಸದರಿ ಕಡತಗಳನ್ನು ಈ ಕಛೇರಿಗೆ ಹಿಂತಿರುಗಿಸಿರುತ್ತಾರೆ.
- ದಿನಾಂಕ. 05.12.2019ರಂದು ಸದರಿ ಸರ್ವೆ ನಂ. 203ರ ಅನುಮೋದನೆ ನೀಡಲು ಅವಶ್ಯವಿರುವ ದಾಖಲಾತಿಗಳನ್ನು ವಿಭಾಗಿಯ ಕಚೇರಿಗೆ ಸಲ್ಲಿಸಲಾಗಿರುತ್ತದೆ. ಮುಂದುವರೆದು, ಸದರಿ ದಾಖಲಾತಿಗಳೊಂದಿಗೆ ಸದರಿ ಸರ್ವೆ ನಂ. ಅಂದಾಜು ಪತ್ರಿಕೆಯನ್ನು ಸಲ್ಲಿಸಲು ಸೂಚಿಸಿರುತ್ತಾರೆ.
- ದಿನಾಂಕ. 23.12.2019ರಂದು ಸದರಿ ಸರ್ವೆ ನಂ. 203ರ ಅನುಮೋದನೆ ಪುನಃ ಅಂದಾಜು ಪತ್ರಿಕೆಯ ಜೊತೆ ಇನ್ನುಳಿದ ದಾಖಲೆಗಳನ್ನು ಸಲ್ಲಿಸಲಾಗಿರುತ್ತದೆ.

- ದಿನಾಂಕ. 24.01.2020ರಂದು, ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನಾ ವಿಭಾಗ ಬಾಗಲಕೋಟ ರವರು, "ಸರ್ವೆ ನಂ. 203,206,207/2/1ಎ ಮತ್ತು207/2/1ಬಿಗೆ ಸಂಬಂದಪಟ್ಟ ಸ್ಥಳ ಪರಿಶೀಲನೆ ಮಾಡಲಾಗಿ ಈಗಾಗಲೇ ಭಾಗಶಃ ವಿದ್ಯುತ್ತೀಕರಣವನ್ನು ತಮ್ಮ ಉಪ ವಿಭಾಗದ ಹಂತದಲ್ಲಿ ಮಾಡಿಕೊಂಡಿದ್ದು ಇರುತ್ತದೆ. ಹಾಗಾಗಿ ಸದರೀ ಎಲ್ಲ ಅರ್ಜಿಗಳನ್ನು ತಮ್ಮ ಉಪವಿಭಾಗದ ಹಂತದಲ್ಲಿ ಮಾಡಿಕೊಂಡಿದ್ದು ಇರುತ್ತದೆ" ಲಿಪತ್ರ ಸಂಖ್ಯೆ. ಅದೀಕ್ಷಕ ಇಂಜೀನಿಯರರು(ವಿ), ಕಾ & ಪಾ ವೃತ್ತ, ಹೆಸ್ಕಾಂ, ಬಾಗಲಕೋಟರವರ ಪತ್ರ ಸಂಖ್ಯೆ. ಬಿಜಿಕೆ/ಅಅ(ವಿ)/ಕಾನಿಇಂ(ವಿ)/ ಸಕಾನಿಇಂ(ವಿ)-1/ತಾಸ-1/2019-2020/11915-16 ದಿನಾಂಕ.08.01.2020ರಂತೆ, ಸದರಿ ಎಲ್ಲ ಅರ್ಜಿಗಳನ್ನು ತಮ್ಮ ಕಛೇರಿಗೆ ಹಿಂತಿರುಗಿಸಲಾಗುತ್ತಿದ್ದು, ವಿದ್ಯುತ ಪೂರೈಸಲು ಕೆ.ಇ.ಆರ್.ಸಿ/ ಕಂಪನಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳ ಸೂಚಿಸಲಾಗಿದೆ ಎಂದು ತಿಳಿಸಿರುತ್ತಾರೆ.
- ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು(ವಿ) ಪತ್ರದನ್ವಯ ಕೆ.ಇ.ಆರ್.ಸಿ. ನಿಯಮಾನುಸಾರ, ದಿನಾಂಕ.27.01.2020ರಂದು ಸದರಿ ಅರ್ಜಿದಾರರ ಅರ್ಜಿಗಳನ್ನು ಮರು ನೊಂದಣಿ ಮಾಡಿಕೊಂಡು ದಿನಾಂಕ. 29.01.2020ರಂದು ಸದರಿ ಗ್ರಾಹಕರಿಗೆ ವಿದ್ಯುತ್ ಮಂಜೂರಾತಿಯನ್ನು ನೀಡಲಾಗಿರುತ್ತದೆ ಹಾಗೂ ಸದರಿ ಗ್ರಾಹಕರಿಗೆ ಆರ್.ಆರ್.ಸಂಖ್ಯೆ. 70823,70824,70825 ರನ್ವಯ ವಿದ್ಯುತ ಸಂಪರ್ಕವನ್ನು ನೀಡಲಾಗಿದೆ.

## ಲಿಖಿತಹೇಳಿಕೆ:-

ಅರ್ಜಿದಾರರಿಗೆ ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು(ವಿ) ಪತ್ರದನ್ವಯ ಕೆ.ಇ.ಆರ್.ಸಿ. ನಿಯಮಾನುಸಾರ, ದಿನಾಂಕ.27.01.2020ರಂದು ಸದರಿ ಅರ್ಜಿದಾರರ ಅರ್ಜಿಗಳನ್ನು ಮರು ನೋಂದಣಿ ಮಾಡಿಕೊಂಡು ದಿನಾಂಕ.29.01.2020ರಂದು ಸದರಿ ಗ್ರಾಹಕರಿಗೆ ವಿದ್ಯುತ್ ಮಂಜೂರಾತಿಯನ್ನು ನೀಡಲಾಗಿರುತ್ತದೆ ಹಾಗೂ ಸದರಿ ಗ್ರಾಹಕರಿಗೆ ಆರ್.ಆರ್.ಸಂಖ್ಯೆ. 70823,70824,70825 ರನ್ವಯ ವಿದ್ಯುತ ಸಂಪರ್ಕವನ್ನು ನೀಡಲಾಗಿದೆ.

**ಶ್ರೀ ಶಾಂತಪ್ಪ.ಬಿ.ಸಾಲಿ, ಸಾ॥ ಬಾಗಲಕೋಟ, ಇವರ ಪರವಾಗಿ ಶ್ರೀ ರಂಗನಾಥ ಮ ಪಾಡಮುಖೆ, ಬಾಗಲಕೋಟ ರವರ ಲಿಖಿತ ಹೇಳಿಕೆಯ ಮುಖ್ಯಾಂಶ :**

- **ಅರ್ಜಿ ಸಲ್ಲಿಸಿದ ಒಂದು ತಿಂಗಳ ಒಳಗಾಗಿ ಸಂಪರ್ಕ ನೀಡಬೇಕಾಗಿತ್ತು, 31.01.2020 ರಂದು ಸಂಪರ್ಕ ನೀಡಲಾಗಿದೆ.**

  - **ಮೇಲಿನ ಅಂಶಗಳ ಮೇಲೆ ಅಧ್ಯಕ್ಷರ ಹೇಳಿಕೆ:-** ಜನೇವರಿ-2020 ರಲ್ಲಿ ವಿದ್ಯುತ್ ಸಂಪರ್ಕ ನೀಡಲಾಗಿದೆ. ಅದು ಅರ್ಜಿದಾರರಿಗೆ ಒಪ್ಪಿಗೆ ಇದೆ. ಖುದ್ದಾಗಿ ನಾನು ಸ್ಥಳ ಪರಿಶೀಲಿಸಲಾಗಿದೆ. ಅಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಇರುವದಿಲ್ಲ ಮತ್ತು ಮುಳುಗಡೆಯಾಗುವ ಪ್ರದೇಶ ಇರುವದು. ಅಲ್ಲಿ ಮನೆ ಆದ ನಂತರ ಟಿ.ಸಿ.ನಂಬರಗಳನ್ನು ನೀಡಲಾಗಿದೆ. ಕೆಲವೊಂದು ಹೊಸ ಮನೆಗಳುಇಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡಲಾಗಿದೆ. ಆದರೆ ಇಲ್ಲಿ ಗ್ರಾಹಕರ ತಪ್ಪು ಇದೆ, ನಿಗಮದ ತಪ್ಪು ಇದೆ. ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ರವರಿಗೆ ಅರ್ಜಿಬಂದ ನಂತರ ನಿಗದಿತ ಅವಧಿಯಲ್ಲಿ ಗ್ರಾಹಕರಿಗೆ ತಿಳುವಳಿಕೆ ಪತ್ರ ನೀಡಬೇಕು ಎಂದು ತಾಂತ್ರಿಕ ಸಹಾಯಕರಿಗೆ ತಿಳಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ.

## ಆ ದೇ ಶ

ಕ್ರ.ಸಂ:ಬಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2018-19/ 14219-14224 ದಿನಾಂಕ: 20 FEB 2020

ಮೇಲಿನ ಅಂಶಗಳನ್ನು ಪರಿಶೀಲಿಸಿ, ಗ್ರಾಹಕರಿಗೆ ಜನೇವರಿ-2020 ರಲ್ಲಿ ದಾಖಲೆಗಳನ್ನು ಪಡೆದುಕೊಂಡು ನಿಗಮದ ನಿಯಮಾನುಸಾರ ವಿದ್ಯುತ್ ಸಂಪರ್ಕ ನೀಡಿರುವದರಿಂದ ಪ್ರಕರಣ ಮುಕ್ತಾಯಗೊಳಿಸಲಾಯಿತು.

20/2

ಶ್ರೀಮತಿ ಸರೋಜಿನಿ ಜಿ. ಹಿರೇಮನಿ
ಉಪ-ಲೆಕ್ಕನಿಯಂತ್ರಣಾಧಿಕಾರಿ, ಹಾಗೂ
ಗ್ರಾ.ಕುಂ.ಕೊ.ನಿ.,ವೇದಿಕೆಯ ಸದಸ್ಯರು,
ಬಾಗಲಕೋಟ

ಶ್ರೀ ಚಂದ್ರಶೇಖರ ವ್ಹಿ. ಶಿವಪೂಜಿ
ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ
ಸದಸ್ಯರು, ಬಾಗಲಕೋಟ

o/c

ಅಧ್ಯಕ್ಷರು 20/2
(ಕೆ ಜಿ ಹಿರೇಮಠ.)
ಅಧೀಕ್ಷಕ ಅಭಿಯಂತರರು(ವಿ)ಬಾಗಲಕೋಟ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟ.

18/2/2020 18/2

ಪ್ರತಿಯನ್ನು:
1) ಮುಖ್ಯ ಇಂಜನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟ ರವರ ಮಾಹಿತಿಗಾಗಿ. .
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಬಾಗಲಕೋಟ ನಗರ ರವರ ಮಾಹಿತಿಗಾಗಿ.
5) ಶ್ರೀ ಶ್ರೀ. ಶಾಂತಪ್ಪ ಭೀ. ಸಾಲಿ, ಬಾಗಲಕೋಟ
6) ಶ್ರೀ ರಂಗನಾಥ ಮ ಪಾಡಮುಖೆ, ಬಾಗಲಕೋಟ ಮಾಹಿತಿಗಾಗಿ .

ಕಛೇರಿ ಪ್ರತಿ/ಪ್ರಧಾನ ಕಡತ.